UN – 493

# I Semester B.C.A. Examination, November/December 2015
## (Fresh + Repeaters) (CBCS) (2014-15 and Onwards)
## ಕನ್ನಡ ಭಾಷಾ ಪತ್ರಿಕೆ – I
## ಸುವರ್ಣ ಸಂಪದ

Time : 3 Hours　　　　Max. Marks : 70

I. ಅ) ಈ ಪದ್ಯದ ಭಾವಾರ್ಥ ಬರೆಯಿರಿ : (1×6=6)

ಬಾಡಿಗೆಯ ಕೊಟ್ಟು ಭಾಗೀರಥಿಯ ದಾಟಿದೆನು
ಇನ್ನು ಉಸಿರಾಡಬಹುದೆ ?
ಸೀರೆಯಂಗಡಿಯವನು ಕೈಮುಗಿದು ನಿಂತಿಹನು
ಎಷ್ಟು ಸಲ "ನಾಳೆ, ನಾಳೆ"

ಆ) **ಎರಡಕ್ಕೆ** ಟಿಪ್ಪಣಿ ಬರೆಯಿರಿ : (2×2=4)

ಕೆ. ಎಸ್. ನರಸಿಂಹಸ್ವಾಮಿ, ಗೋಪಾಲಕೃಷ್ಣ ಅಡಿಗ, ಮಾಹಿತಿ ತಂತ್ರಜ್ಞಾನ, ಧಾರವಾಡದ ಮಣ್ಣು

ಇ) **ಒಂದು** ಪ್ರಶ್ನೆಗೆ ವಿವರವಾಗಿ ಉತ್ತರಿಸಿ : (1×10=10)

1) ಮಧ್ಯಮ ವರ್ಗದವರ ಆರ್ಥಿಕ ದುಸ್ಥಿತಿಯನ್ನು 'ಸಂಬಳದ ಸಂಜೆ' – ಕವನ ಹೇಗೆ ವಿವರಿಸುತ್ತದೆ ?

2) ಶುಕ್ರಾಚಾರ್ಯ – ವೇದವ್ಯಾಸರನ್ನು ಕಂಡಾಗ ದೇವಕನ್ನಿಕೆಯರ ಭಾವನೆಯಲ್ಲಿ ಕಂಡು ಬಂದ ವ್ಯತ್ಯಾಸಗಳನ್ನು ಬರೆಯಿರಿ.

II. ಅ) **ಎರಡು** ಪ್ರಶ್ನೆಗಳಿಗೆ ಸಂಕ್ಷಿಪ್ತವಾಗಿ ಉತ್ತರಿಸಿ : (2×5=10)

1) ಕುಂಡಜ್ಜ ಕನಸಿನಲ್ಲಿ ಕಂಡ ಕ್ವಾಣದ ರೂಪ.

2) ಗೌಡನ ಮನೆಯಲ್ಲಿ ಸುಬ್ಬ ಸಾಲದ ಮಗುವಾಗಿ ದುಡಿಯಲು ಕಾರಣ.

3) ಶೈಲೆಯ ಸಾಹಸ ಕಾರ್ಯ.

ಆ) **ಒಂದು** ಪ್ರಶ್ನೆಗೆ ವಿವರವಾಗಿ ಉತ್ತರಿಸಿ : (1×10=10)

1) ಮನುಷ್ಯತ್ವವನ್ನು ಮರೆತ ಗೌಡ ಮಗುವಿನ ಭವಿಷ್ಯವನ್ನು ಬಲಿತೆಗೆದುಕೊಂಡದ್ದು ಹೇಗೆ ? ವಿವರಿಸಿ.

2) ಮರದ ಬೊಂಬೆಯೇ ಶೈಲೆಯ ಬಾಳಸಂಗಾತಿಯಾದ ಪ್ರಸಂಗವನ್ನು ವಿವರಿಸಿ.

III. ಅ) **ಒಂದು** ಪ್ರಶ್ನೆಗೆ ಸಂಕ್ಷಿಪ್ತವಾಗಿ ಉತ್ತರಿಸಿ : (1×5=5)

1) ಯರವಾಡ ಜೈಲಿನ ಅನುಭವ.

2) ಟುವ್ವಿ ಹಕ್ಕಿಗಳೆರಡು ಮನೆ ನಿರ್ಮಿಸಿದ ಕುರಿತು ಲೇಖಕರ ವಿಸ್ಮಯ.

ಆ) **ಒಂದು** ಪ್ರಶ್ನೆಗೆ ವಿವರವಾಗಿ ಉತ್ತರಿಸಿ : (1×10=10)

1) ರುಚಿ ತಿಳಿದ ರಸಿಕರ ಊಟದ ವರ್ಣನೆ 'ರುಚಿ' – ಪ್ರಬಂಧದಲ್ಲಿ ಹೇಗೆ ರೂಪಿತವಾಗಿದೆ ? ವಿವರಿಸಿ.

2) ಲೇಖಕರು ಮನೆಯ ಹಿತ್ತಲಲ್ಲಿ ಕೈತೋಟ ನಿರ್ಮಿಸಿ ಪಕ್ಷಿಗಳಿಂದ ಪಟ್ಟ ಫಜೀತಿಯನ್ನು ವಿವರಿಸಿ.

IV. ಅ) **ಒಂದು** ಪ್ರಶ್ನೆಗೆ ಸಂಕ್ಷಿಪ್ತವಾಗಿ ಉತ್ತರಿಸಿ : (1×5=5)

1) ಕನ್ನಡ ನುಡಿ ತಂತ್ರಾಂಶವನ್ನು ಪರಿಚಯಿಸಿ.

2) ಸೇಡಿಯಾಪು ಪದ ಸಂಸ್ಕಾರ.

ಆ) **ಒಂದು** ಪ್ರಶ್ನೆಗೆ ವಿವರವಾದ ಉತ್ತರ ಬರೆಯಿರಿ : (1×10=10)

1) ಕೆ. ಪಿ. ರಾಯರ ಜೀವನ ಮತ್ತು ಸಾಧನೆಯನ್ನು ಸಂಕ್ಷಿಪ್ತವಾಗಿ ಬರೆಯಿರಿ.

2) ಕನ್ನಡದ ಅಕ್ಷರ ಶೈಲಿ ಮತ್ತು ಕೀಲಿಮಣೆಗಳ ಸಂಬಂಧ ಅಭಿವೃದ್ಧಿಗೊಂಡ ಬಗೆಯನ್ನು ವಿವರಿಸಿ.

---